ಶ್ರೀ ಜಿ. ನಾರಾಯಣಕುಮಾರ್.— ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು, ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಸ್ಥಾಪನೆ ಮಾಡುವ ವಿಚಾರವನ್ನು ಕೇಳಿ ಸಂತೋಷವಾಯಿತು. ಕರ್ನಾಟಕದ ರಾಜಧಾನಿ ಬೆಂಗಳೂರು ನಗರದ ವಿಧಾನ ಸೌಧದ ಮುಂದೆ ಒಂದು ಪ್ರತಿಮೆಯನ್ನು ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ವಿಧಾನ ಸೌಧದ ಮುಂದೆ ಯಾರ ಯಾರ ಪ್ರತಿಮೆ ಹಾಕಬೇಕಾಗಿತ್ತದೋ ಗೊತ್ತಿಲ್ಲ. ಆದರೆ, ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಬೆಳಗಾಂ ನಗರದಲ್ಲಿ ಅತಿ ಸುಂದರವಾಗಿ ಅಲ್ಲಿನ ಸ್ಥಾನೀಕ ಸಂಸ್ಥೆಯವರು ಮತ್ತು ಜಿಲ್ಲೆಯವರು ಸ್ಥಾಪನೆ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ನಾರಾಯಣಕುಮಾರ್‌ರವರ ಪ್ರತಿಮೆಯನ್ನು ವಿಧಾನ ಸೌಧದ ವಂಂದೆ ಹಾಕಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಮಹಿಳೆಯ ಪ್ರತಿಮೆಯನ್ನು ದೇಶದ ರಾಜಧಾನಿಯಲ್ಲಿ ಸ್ಥಾಪನೆ ಮಾಡುವುದು ಸೂಕ್ತ. ಅದಕ್ಕೆ ಬೇಕಾದಂಥ ಖರ್ಚನ್ನು ಕೂಡ ನಾವೇ ನೋಡಿಕೊಳ್ಳುತ್ತೇವೆಂದು ಹೇಳಿದ್ದೇವೆ. ಯೋಗ್ಯವಾದಂಥ ಸ್ಥಳವನ್ನು ಈ ಎರಡು ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೊಡಬೇಕೆಂದು ಕೇಳಿಕೊಂಡಿದ್ದೇವೆ.

ರಾಜ್ಯದಲ್ಲಿ ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ

೬೯೨. ಶ್ರೀಮತಿ ಸುಮಾ ವಸಂತ್ (ವಿರಾಜ ಪೇಟೆ).— ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೪–೮೫, ೧೯೮೫–೮೬, ೧೯೮೬–೮೭ ರಲ್ಲಿ ರಾಜ್ಯದಲ್ಲಿರುವ ಆಸ್ಪತ್ರೆ ಕಟ್ಟಡಗಳ ದುರಸ್ತಿ ಹಾಗೂ ಹೊಸ ಕಟ್ಟಡಗಳು ಮಂತ್ರಿ, ನೌಕರ ವರ್ಗದವರ ವಾಸದ ಕಟ್ಟಡಗಳ ದುರಸ್ತಿಗಾಗಿ ಮಂಜೂರಾದ ಹಣ ಎಷ್ಟು?

ಆ) ಕೊಡಗು ಜಿಲ್ಲೆಗೆ ಈ ಸಾಲಿನಲ್ಲಿ ದುರಸ್ತಿ ಹಾಗೂ ಹೊಸ ಕಟ್ಟಡಗಳಿಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು (ತಾಲ್ಲೂಕುವಾರು ಮಾಹಿತಿ ಬೇಕು)

ಇ) ಇದರಲ್ಲಿ ಆಸ್ಪತ್ರೆ ಕಟ್ಟಡಗಳ ಬಗ್ಗೆ ಹಾಗೂ ವಾಸದ ಕಟ್ಟಡಗಳ ಬಗ್ಗೆ ಮಾಡಿದ ಖರ್ಚೆಷ್ಟು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು). —

ಲಕ್ಷ ರೂ.ಗಳಲ್ಲಿ

	೧೯೮೪–೮೫	೧೯೮೫–೮೬	೧೯೮೬–೮೭
ಆಸ್ಪತ್ರೆಗಳ ಹೊಸ ಕಟ್ಟಡ	೬೨೫.೯೪	೫೮೪.೪೫	೨೯೬.೫೬
ನೌಕರ ವರ್ಗದ ವಾಸದ ಕಟ್ಟಡ	೨೮.೭೦	೩೧.೫೪	೮೮೦.೭೦
ಕಟ್ಟಡಗಳ ದುರಸ್ತಿ	೩೭೭.೦೦	೩೨೪.೦೨	೪೮೨.೪೪

ಆಯಾಮ್ಯಯ ಪಟ್ಟಿಯಲ್ಲಿ ಒದಗಿಸಿರುವ ಮೊತ್ತ

ಮಡಿಕೇರಿ ತಾಲ್ಲೂಕು		ಸೋಮವಾರ ಪೇಟೆ ತಾಲ್ಲೂಕು		ವಿರಾಜಪೇಟೆ ತಾಲ್ಲೂಕು	
ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ	ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ	ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ
೧೪.೬೭ ಆಸ್ಪತ್ರೆ	೫.೬೨ ವಸತಿಗೃಹ	೧೪.೭೯ ಆಸ್ಪತ್ರೆ	೩.೦೮ ವಸತಿಗೃಹ	೧೨.೫೬ ಆಸ್ಪತ್ರೆ	೩. ೪ ವಸತಿಗೃಹ
೪.೦೭	೦.೨೦	೫.೭೦	೦.೬೨	೪.೦೫	೦.೭೧

ಶ್ರೀಮತಿ ಸುಮಾ ವಸಂತ.— ಅಧ್ಯಕ್ಷರೆ, ಕೊಡಗು ಜಿಲ್ಲೆಗೆ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಎಷ್ಟು ಹಣ ಉಳಿದಿದೆ? ಜಿಲ್ಲೆಯಲ್ಲಿ ಹೊಸ ಕಟ್ಟಡಗಳು ಎಷ್ಟೆಷ್ಟು ಆಗಿವೆ?

ಶ್ರೀ ಹೆಚ್.ಟಿ. ಕೃಷ್ಣಪ್ಪ.— ಅಧ್ಯಕ್ಷರೆ, ವಿವರಗಳು ಈಗ ನನ್ನ ಕಡೆ ಇಲ್ಲ. ಜಿಲ್ಲೆಯಲ್ಲಿ ಒಟ್ಟು ಖರ್ಚು ಮಾಡಿದ ಹಣದ ವಿವರಗಳನ್ನು ಕೊಟ್ಟಿದ್ದೇನೆ. ಬಾಕಿ ವಿವರಗಳನ್ನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ.— ಮಡಿಕೇರಿಯಲ್ಲಿ ಹೊಸ ಕಟ್ಟಡ ಆಗುತ್ತಿದೆ. ಅದಕ್ಕೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.— ಹಣವನ್ನು ಲೋಕೋಪಯೋಗಿ ಇಲಾಖೆಗೆ ಕೊಡುತ್ತೇವೆ. ಅವರು ಕಂಟ್ರಾಕ್ಟರುಗಳನ್ನು ನೇಮಕ ಮಾಡಿ ಕೆಲಸ ಮಾಡಿಸಬೇಕು. ಅನಿರೀಕ್ಷಿತ ತೊಂದರೆಗಳಿಂದಾಗಿ ಕೆಲಸ ನಿಧಾನವಾಗುತ್ತದೆ. ಇಲ್ಲಿ ಹಣದ ಕೊರತೆ ಬಂದಿಲ್ಲ. ತಮಗೆ ಅಂಕಿ ಅಂಶಗಳನ್ನು ಕೊಟ್ಟಿರುವ ಪ್ರಕಾರ ಕೊಟ್ಟ ಹಣ ೧೨.೫೬ ಲಕ್ಷ ಖರ್ಚಾಗಿರುವುದು ೪.೫೬ ಲಕ್ಷ. ಆದುದರಿಂದ ಹಣದ ಕೊರತೆಯ ಪ್ರಶ್ನೆ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಬಜೆಟ್‌ನಲ್ಲಿ ಇದನ್ನು ಸೇರಿಸಿರಬಹುದು. ಆದರೆ ಎಲ್.ಓ.ಸಿ ರಿಲೀಜ್ ಮಾಡಿದರೆ ಮ್ಯಾತ ಅವರಿಗೆ ಹಣ ಹೋಗುತ್ತದೆ. ಆಜಿಲ್ಲೆಯಲ್ಲಿಎಲ್.ಓ.ಸಿ.ರಿಲೀಸ್ ಮಾಡಿಲ್ಲ. ಆದುದರಿಂದ ಹಣ ಹೋಗಿಲ್ಲ. ಕೆಲಸ ಕೂಡ ನಿಂತಿದೆ. ಹಣವನ್ನು ಯಾವಾಗ ರಿಲೀಸ್ ಮಾಡಿದ್ದಾರೆ ಎಂಬುದನ್ನು ತಿಳಿಸಿ?

ಶ್ರೀ ಹೆಚ್.ಟಿ. ಕೃಷ್ಣಪ್ಪ.— ಎಲ್.ಓ.ಸಿ. ಕಟ್ಟತಕ್ಕವರು ಕಾಮಗಾರಿ ಇಲಾಖೆಯವರು. ಎಲ್.ಓ.ಸಿ. ಎಷ್ಟಕ್ಕೆ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಈಗ ಮಾಹಿತಿ ಇಲ್ಲ, ಮಾಹಿತಿ ಪಡೆದು ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು. ಹೆಚ್ಚು ಹಣ ಕೊಡುವುದಾದರೆ ಕೊಡಿ.

ಶ್ರೀಮತಿ ಸುಮಾ ವಸಂತ್ (ನಿರಾಜಪೇಟೆ).— ಸನ್ಮಾನ್ಯ ಅಧ್ಯಕ್ಷರೇ, ಮಡಿಕೇರಿಯಲ್ಲಿ ಮಾತ್ರ ವಸತಿಗೃಹಗಳು ಇವೆ. ಸರ್ಕಾರದವರು ಎಲ್ಲಾ ವೈದ್ಯಾಧಿಕಾರಿಗಳಿಗೂವಸತಿಗೃಹಗಳನ್ನು ಕಟ್ಟಿಸಿಕೊಡುವ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ನಾನು ಬೇರೆ ಪ್ರಶ್ನೆಗೆ ಉತ್ತರ ಕೊಡುವಾಗ ಈಗಾಗಲೇ ಹೇಳಿದ್ದೇನೆ. ನಾವು ಪ್ರಥಮವಾಗಿ ೪ ಜಿಲ್ಲೆಗಳಲ್ಲಿ ಹೆಡ್‌ಕೋ ಯೋಜನೆ ಮುಖಾಂತರ ಆರೋಗ್ಯ ಇಲಾಖೆಯಲ್ಲಿ ವಸತಿಗೃಹಗಳನ್ನು ಕಟ್ಟಿಸಿಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾವ ಯಾವ ಜಿಲ್ಲೆಗಳು ಎಂದು ಹೇಳಿ?

ಶ್ರೀ ಹೆಚ್.ಟಿ. ಕೃಷ್ಣಪ್ಪ.— ಕೋಲಾರ, ಬಳ್ಳಾರಿ, ಕೊಡಗು ಮತ್ತು ಕಾರವಾರ ಜಿಲ್ಲೆಗಳಲ್ಲಿ ಈ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಅಂಕಲಗಿ ಗ್ರಾಮದಲ್ಲಿ ವಾಹನ ನಿಲ್ದಾಣ

೭೧೦. **ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).**— ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧಿಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕಲಗಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು ಸರಕಾರದವರ ಯೋಜನೆಯಲ್ಲಿದೆಯೇ?

ಆ) ಹಾಗಿಲ್ಲದಲ್ಲಿ ತಡವಾಗಲು ಕಾರಣಗಳೇನು?